ಮೂಲ ದಾವಾ ನಂ.ಃ88-13
ಪಿ.ಡಬ್ಲ್ಯು.:1

ಸಾಕ್ಷಿಯನ್ನು ದಿನಾಂಕಃ 13-12-2018 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

ಪಾಟೀ ಸವಾಲು ಃ ಶ್ರೀ ವಿ.ಎಂ.ಬಿ ವಕೀಲರಿಂದ ಃ

ಸಂತಾನ ರೆಮೆಂದಿ ವಾಜ್ ನನ್ನ ತಾಯಿ. ದಾವೆ ದಾಖಲಾದ ನಂತರ ನನ್ನ ತಾಯಿ ನ್ಯಾಯಾಲಯಕ್ಕೆ ಬಂದು ಹೋಗುತ್ತಿದ್ದಳು. ಈಗಲೂ ನನ್ನ ತಾಯಿ ಆರೋಗ್ಯವಾಗಿ ಇದ್ದಾಳೆ ಎಂದರೆ ಸರಿಯಲ್ಲ. ನನ್ನ ತಾಯಿಗೆ ನಾನು ಕಿರಿಯ ಮಗಳು. ನನ್ನ ತಾಯಿಗೆ ಗಂಡು ಮಕ್ಕಳಿದ್ದಾರೆ. ನಮ್ಮ ಮನೆಯ ಜವಾಬ್ದಾರಿ ಮತ್ತು ವ್ಯವಹಾರವನ್ನು ನಾನೇ ನೋಡಿಕೊಳ್ಳುತ್ತೇನೆ. ನಾನು ದ್ವಿತಿಯ ಪಿಯುಸಿ ಮುಗಿಸಿದ್ದೇನೆ .

ದಾವಾ ಸರ್ವೆ ನಂಬರಗಳೆಂದರೆ 178 ಮತ್ತು 186 ಚಿಕನ್‌ಕೊಡ ಗ್ರಾಮ. ದಾವಾ ಸ್ಥಳದ ಪೂರ್ವ ದಿಕ್ಕಿಗೆ ರಸ್ತೆ ಇದೆ. ಸದ್ರಿ ರಸ್ತೆ 5 ಫಿಟ್ ಎತ್ತರದಲ್ಲಿದೆ. ಸದ್ರಿ ರಸ್ತೆಯಾಗಿ 10 ವರ್ಷವಾಗಿರಬಹುದು ಅದಕ್ಕೂ ಮೊದಲು ಅದು ಕಾಲು ದಾರಿಯಾಗಿತ್ತು. ರಸ್ತೆಯ ಪೂರ್ವ ದಿಕ್ಕಿಗೆ ಗುಡ್ಡ ಪ್ರದೇಶ ಇದೆ. ಸದ್ರಿ ಗುಡ್ಡದ ನೀರು ರಸ್ತೆಯ ಮೇಲೆ ಹರಿಯುತ್ತದೆ ಅಲ್ಲಿಂದ ತಗ್ಗು ಪ್ರದೇಶಕ್ಕೆ ಹರಿಯುತ್ತದೆ. ಈ ರೀತಿ ನೀರು ಹರಿಯುತ್ತದೆ ಎಂದು ಮೊದಲೆ ಪೈಪ್ ಅಳಡಿಸಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪೈಪ್‌ಗಳನ್ನು ದಾವೆ ಹಾಕುವ 10 ವಷಶಗಳ ಪೂರ್ವದಲ್ಲಿ ಅಳವಡಿಸಿದ್ದರು ಎನ್ನುತ್ತಾರೆ. ಸದ್ರಿ ಅಳವಡಿಸಿದ ಪೈಪ ನಾಲ್ಕು ಫಿಟ್ ಸುತ್ತಳತೆ ಆಗಿರುತ್ತದೆ. ಸದ್ರಿ ಪೈಪ ಖಾಸಗಿಯವರು ಹಾಕಿದ್ದಾರೊ ಸರ್ಕಾರದ ವತಿಯಿಂದ ಹಾಕಿದ್ದಾರೊ ಎಂದು ನನಗೆ ಗೊತ್ತಿಲ್ಲ . ಪೈಪ ಹಾಕುವಾಗ ನಾನು ಹಾಜರಿರಲಿಲ್ಲ .

ದಾವಾ ಆಸ್ತಿಗಳನ್ನು ನನ್ನ ತಾಯಿ ಯಾವ ವರ್ಷ ಖರೀದಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ . ದಾವಾ ಆಸ್ತಿಗಳನ್ನು ನಾರಾಯಣ ತಿಮ್ಮಣ್ಣ ಭಟ್ಟ ಅವರಿಂದ ಖರಿದಿಸಿದ್ದಾರೆ. ಪೈಪಗಳನ್ನು ನಾವು ದಾವಾ ಆಸ್ತಿಗಳನ್ನು ಖರೀದಿಸಿದ ನಂತರ ಅಳವಡಿಸಲಾಗಿದೆ. ಸದ್ರಿ ಪೈಪಗಳನ್ನು ನಾವು ದಾವಾ ಸ್ಥಳವನ್ನು ಖರೀದಿಸಿದ ಮೊದಲೇ ಅಳವಡಿಸಿದ್ದರು ಎಂದರೆ ಸರಿಯಲ್ಲ .

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೇಳಿರುತ್ತಾರೆ .

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ. ಹೇ. ಕೆ. ಸರಿ ಇದೆ,

ಪ್ರಧಾನ ಸಿವಿಲ್ ಜಡ್ಜ್, ಹೊನ್ನಾವರ.